ನಾಡೋಜ ಡಾ. ಮಹೇಶ ಜೋಶಿ
**ಅಧ್ಯಕ್ಷರು**
ಸನಿಹವಾಣಿ : +೯೧ ೯೪೪೮೪ ೯೦೨೪೦
+೯೧ ೮೦೭೩೦ ೦೬೮೭೪
ಮಿಂಚಂಚೆ : nadojamj@gmail.com

**ಕನ್ನಡ ಸಾಹಿತ್ಯ ಪರಿಷತ್ತು**
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ,
ಬೆಂಗಳೂರು - ೫೬೦ ೦೧೮.
ದೂರವಾಣಿ : ೦೮೦ ೨೬೬೧೨೯೯೧,
೦೮೦ ೨೬೬೨೩೫೮೪
ಸ್ಥಾಪನೆ : ೧೯೧೫

ಕ್ರಮಸಂಖ್ಯೆ : ಕಸಾಪ/ಆಪ್ತಶಾಖೆ/ದಾಖಲೆ/೨೦೨೨-೨೩ ದಿನಾಂಕ ೧೨-೦೫-೨೦೨೨

ಸನ್ಮಾನ್ಯ ಶ್ರೀ ಬಸವರಾಜ ಬೊಮ್ಮಾಯಿ ಅವರು
ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ
ವಿಧಾನಸೌಧ, ಬೆಂಗಳೂರು

ಸನ್ಮಾನ್ಯರೆ,

**ವಿಷಯ : ಸಿರಿಗೆರೆಯ ಶ್ರೀ ತರಳುಬಾಳು ಜಗದ್ಗುರುಗಳು ಹಾವೇರಿಯಲ್ಲಿ ೨೦೨೨ರ ಸೆಪ್ಟೆಂಬರ್ ೨೩, ೨೪ ಹಾಗೂ ೨೫ ರಂದು ೮೬ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ನಡೆಸಲು ತೀರ್ಮಾನಿಸಿರುವುದನ್ನು ಮುಂದೂಡುವಂತೆ ಕೋರಿರುವುದರ ಬಗ್ಗೆ.**

* * *

೧. ಹಾವೇರಿಯಲ್ಲಿ ೮೬ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಹಿರಿಯ ಕವಿ ಡಾ. ದೊಡ್ಡರಂಗೇಗೌಡ ಅವರ ಸರ್ವಾಧ್ಯಕ್ಷತೆಯಲ್ಲಿ ಜರುಗಿಸುವ ಕುರಿತಂತೆ, ಸಮ್ಮೇಳನದ ದಿನಾಂಕಗಳನ್ನು ನಿಗದಿಪಡಿಸಲು ತಮ್ಮ ಅಧ್ಯಕ್ಷತೆಯಲ್ಲಿ ದಿನಾಂಕ ೨೩-೦೪-೨೦೨೨ ರಂದು ಗೃಹ ಕಚೇರಿ ಕೃಷ್ಣಾದಲ್ಲಿ ನಡೆದ ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ ಚರ್ಚಿಸಿ, **೨೦೨೨ರ ಸೆಪ್ಟೆಂಬರ್ ೨೩, ೨೪ ಹಾಗೂ ೨೫** ರಂದು ಮೂರು ದಿನಗಳ ಕಾಲ ನಡೆಸಲು ಒಮ್ಮತದಿಂದ ನಿರ್ಧರಿಸಲಾಗಿತ್ತು.

೨. ಸಿರಿಗೆರೆಯ ಶ್ರೀ ತರಳುಬಾಳು ಜಗದ್ಗುರು ಬೃಹನ್ಮಠದ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು ನನಗೆ ವೈಯಕ್ತಿಕವಾಗಿ ದೂರವಾಣಿ ಮಾಡಿ ಹಾಗೂ ಪತ್ರ ಕಳಿಸಿ, **ಬೃಹನ್ಮಠದ ೨೦ನೆಯ ಜಗದ್ಗುರುಗಳಾಗಿದ್ದ ಲಿಂಗೈಕ್ಯ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರ ಶ್ರದ್ಧಾಂಜಲಿ** ಸಮಾರಂಭವು ಪ್ರತಿವರ್ಷದಂತೆ ಈ ಬಾರಿಯೂ **೨೦೨೨ರ ಸೆಪ್ಟೆಂಬರ್ ೨೩, ೨೪ ರಂದು ನಡೆಯುವುದರಿಂದ ಹಾವೇರಿ, ರಾಣೆಬೆನ್ನೂರು, ರಟ್ಟಿಹಳ್ಳಿ, ಹಿರೇಕೆರೂರು ಹಾಗೂ ಇತರೆ ಭಾಗಗಳಿಂದ ಬರುವ ಲಕ್ಷಾಂತರ ಭಕ್ತಾದಿಗಳಿಗೆ ಅನಾನುಕೂಲವಾಗುವುದರಿಂದ** ಸಮ್ಮೇಳನದ ನಿಗದಿತ ದಿನಾಂಕಗಳನ್ನು ಮುಂದೂಡಬೇಕೆಂದು ಕೋರಿರುತ್ತಾರೆ. ಪೂಜ್ಯ ಶ್ರೀಗಳು ತಮ್ಮ ಜೊತೆಗೂ ಈ ಬಗ್ಗೆ ಚರ್ಚಿಸುವುದಾಗಿ ತಿಳಿಸಿದ್ದಾರೆ.

೩. ವಕೀಲರಾದ ಶ್ರೀ ಬಸವರಾಜ ಹುಡೇದಗಡ್ಡಿ, ಹಾವೇರಿ ಜಿಲ್ಲೆಯ ಕನಕಪೀಠದ ಸ್ವಾಮೀಜಿಗಳು ಸೇರಿದಂತೆ ಅನೇಕ ಗಣ್ಯರು, ಸಾಹಿತಿಗಳು, ಜನಸಾಮಾನ್ಯರು ನನಗೆ ಕರೆಮಾಡಿ ಹಾಗೂ ಪತ್ರ ಮುಖೇನ ದಾಸ ಸಾಹಿತ್ಯದ ಮೂಲಕ ಸಮಾಜದಲ್ಲಿ ಸಮನ್ವಯ ತರುವಲ್ಲಿ ವಿಶಿಷ್ಟ ಪಾತ್ರವಹಿಸಿದ, ಹಾವೇರಿ ಜಿಲ್ಲೆಯ ಹೆಮ್ಮೆಯ **ದಾಸಶ್ರೇಷ್ಠರಾದ ಶ್ರೀ ಕನಕದಾಸರಿಗೆ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯುವ ಸಂದರ್ಭದಲ್ಲಿ ಸೂಕ್ತ ಗೌರವ ಸಲ್ಲಿಸಲು, ಅವರ ಜಯಂತಿ ದಿನವಾದ ನವೆಂಬರ್ ೧೧ರಂದು ಸರ್ಕಾರಿ ರಜೆ ಇದ್ದು, ಮರುದಿನಗಳಾದ ೧೨ರಂದು ಎರಡನೆಯ ಶನಿವಾರ ಮತ್ತು ೧೩ರಂದು ಭಾನುವಾರವಾದ್ದರಿಂದ** ನಾಡಿನಾದ್ಯಂತ ಭಾಗವಹಿಸುವವರಿಗೆ ಅನುಕೂಲವಾಗುವ ಉದ್ದೇಶದಿಂದ, ಈಗ ನಿರ್ಧರಿಸಿರುವ ದಿನಾಂಕಗಳಿಂದ ಸಮ್ಮೇಳನವನ್ನು ಮುಂದೂಡಿ, **೨೦೨೨ರ ನವೆಂಬರ್ ೧೧, ೧೨ ಹಾಗೂ ೧೩** ರಂದು ಜರುಗಿಸಬೇಕೆಂದು ಮನವಿ ಸಲ್ಲಿಸಿದ್ದಾರೆ.

೨ನೇ ಪುಟಕ್ಕೆ...

೪. ಕನ್ನಡ ಸಾಹಿತ್ಯ ಪರಿಷತ್ತು ಸ್ವಾಮೀಜಿಗಳ, ಸಾಹಿತಿಗಳ, ವಿದ್ವಾಂಸರ, ಮಾಧ್ಯಮ ಮಿತ್ರರ ಹಾಗೂ ಸಾರ್ವಜನಿಕರ ಈ ಮೇಲ್ಕಂಡ ಅಪೇಕ್ಷೆಗಳನ್ನು ಹಾಗೂ ಮನವಿಗಳನ್ನು ಗೌರವಿಸುವ ಹಿನ್ನೆಲೆಯಲ್ಲಿ ಮತ್ತು ಈಗ ನಿಗದಿಪಡಿಸಿರುವ ೨೦೨೨ರ ಸೆಪ್ಟೆಂಬರ್ ೨೫ ರಂದು **ಮಹಾಲಯ ಅಮಾವಾಸ್ಯೆ** ಇರುವುದರಿಂದ ಪಿತೃಪಕ್ಷದಲ್ಲಿ ಸಮ್ಮೇಳನವನ್ನು ನಡೆಸುವುದು ಸೂಕ್ತವಲ್ಲವಾದ್ದರಿಂದ, ನಾಡಿನಾದ್ಯಂತದಿಂದ ಭಾಗವಹಿಸುವ ಕನ್ನಡಿಗರಿಗೆ ಅನಾನುಕೂಲವಾಗುವ ದೃಷ್ಟಿಯಿಂದ ಈಗ ನಿಗದಿಪಡಿಸಿರುವ ೨೦೨೨ರ ಸೆಪ್ಟೆಂಬರ್ ೨೩, ೨೪ ಹಾಗೂ ೨೫ರ ಬದಲಾಗಿ **೨೦೨೨ರ ನವೆಂಬರ್ ೧೧, ೧೨ ಹಾಗೂ ೧೩ ರಂದು** ೮೬ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ನಡೆಸಲು ದಿನಾಂಕ ನಿಗದಿಪಡಿಸಿಕೊಡಬೇಕೆಂದು, ಕನ್ನಡ ಸಾಹಿತ್ಯ ಪರಿಷತ್ತು ಈ ಮೂಲಕ ತಮ್ಮನ್ನು ಕೋರುತ್ತಿದೆ.

೫. ನವೆಂಬರ್ **'ಕನ್ನಡ ರಾಜ್ಯೋತ್ಸವ'** ತಿಂಗಳಾದುದರಿಂದ ಹಾವೇರಿ ಸಮ್ಮೇಳನವನ್ನು ನವೆಂಬರ್‌ನಲ್ಲಿ ನಡೆಸುವುದು ಸಂಭ್ರಮಕ್ಕೆ ಇಂಬು ಕೊಡುತ್ತದೆ.

೬. ಕೋವಿಡ್-೧೯ರ ಹಿನ್ನೆಲೆಯಲ್ಲಿ ಕಳೆದ ಎರಡು ವರ್ಷಗಳಿಂದ ನೆರವೇರದ ಈ ಅಕ್ಷರಜಾತ್ರೆಯನ್ನು **ಇನ್ನಾವುದೇ ಕಾರಣಕ್ಕೂ ಮುಂದೂಡದೇ / ಹಿಂದೂಡದೇ ೧೧, ೧೨ ಹಾಗೂ ೧೩ ನವೆಂಬರ್ ೨೦೨೨** ರಂದು ನಡೆಸಲು ಅಂತಿಮವಾಗಿ ದಿನಾಂಕಗಳನ್ನು ನಿಗದಿಪಡಿಸಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತೇನೆ.

೭. ಈ ಹಿಂದೆ ಪೂರ್ವಭಾವಿ ಸಭೆಯನ್ನು ಏರ್ಪಡಿಸಿ ಸಮ್ಮೇಳನದ ದಿನಾಂಕಗಳನ್ನು ನಿರ್ಧರಿಸಿದಂತೆ, ತಮ್ಮ ಅಧ್ಯಕ್ಷತೆಯಲ್ಲಿ ಮತ್ತೊಂದು ಸಭೆಯನ್ನು ಏರ್ಪಡಿಸಿ ಅಂತಿಮ ದಿನಾಂಕಗಳನ್ನು ನಿಗದಿಪಡಿಸಬೇಕೆಂದು ತಮ್ಮಲ್ಲಿ ಪ್ರಾರ್ಥಿಸುವೆ.

ಗೌರವಗಳೊಂದಿಗೆ,

ತಮ್ಮ ವಿಶ್ವಾಸಿ,
ಸಹಿ/-
**(ನಾಡೋಜ ಡಾ. ಮಹೇಶ ಜೋಶಿ)**
ಅಧ್ಯಕ್ಷರು

**ಪ್ರತಿಯನ್ನು : ಮಾನ್ಯ ಜಿಲ್ಲಾಧಿಕಾರಿಗಳು,** ಹಾವೇರಿ ಜಿಲ್ಲೆ, ಹಾವೇರಿ – ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

**(ನಾಡೋಜ ಡಾ. ಮಹೇಶ ಜೋಶಿ)**
ಅಧ್ಯಕ್ಷರು

ಶ್ರೀಮದುಜ್ಜಯಿನಿಸದ್ಧರ್ಮಸಿಂಹಾಸನ

# ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ

ಸಿರಿಗೆರೆ – 577 541 ಚಿತ್ರದುರ್ಗ ಜಿಲ್ಲೆ ಕರ್ನಾಟಕ

ತಂತಿ : "ತರಳಬಾಳು" ದೂರವಾಣಿ : 08194 - 268829, 268843, 268853 ಫ್ಯಾಕ್ಸ್ : 08194 - 268847

ಇ–ಮೇಲ್ : ao@taralabalu.org / ao.taralabalu@gmail.com

STJM/2022

ದಿನಾಂಕ: 25.4.2022

ನಾಡೋಜ ಡಾ। ಮಹೇಶ್ ಜೋಶಿ ಅವರು
ರಾಜ್ಯಾಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು – 560 018

ವಿಷಯ: ಹಾವೇರಿಯಲ್ಲಿ 2022ರ ಸೆಪ್ಟೆಂಬರ್ 23, 24 ಹಾಗೂ 25 ರಂದು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ನಡೆಸಲು ತೀರ್ಮಾನಿಸಿರುವುದನ್ನು ಮುಂದೂಡುವ ಬಗ್ಗೆ ಮನವಿ.

ಮಾನ್ಯರೆ,

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರವು ಹಾವೇರಿಯಲ್ಲಿ ಸೆಪ್ಟೆಂಬರ್ 23, 24 ಹಾಗೂ 25 ರಂದು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ನಡೆಸಲು ತೀರ್ಮಾನಿಸಿರುವುದು ಈ ದಿನದ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಆದರೆ ನಮ್ಮ ಶ್ರೀ ಬೃಹನ್ಮಠದ 20ನೆಯ ಜಗದ್ಗುರುಗಳಾಗಿದ್ದ ಲಿಂಗೈಕ್ಯ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳರ ಶ್ರದ್ಧಾಂಜಲಿ ಸಮಾರಂಭವು ಪ್ರತಿ ವರ್ಷದಂತೆ ಈ ಬಾರಿಯೂ 2022ರ ಸೆಪ್ಟೆಂಬರ್ 23, 24 ರಂದು ನಡೆಯುವುದರಿಂದ ಹಾವೇರಿ, ರಾಣೇಬೆನ್ನೂರು, ರಟ್ಟಿಹಳ್ಳಿ, ಹಿರೇಕೆರೂರು ಹಾಗೂ ಇತರೆ ಭಾಗಗಳಿಂದ ಬರುವ ಭಕ್ತಾದಿಗಳಿಗೆ ತುಂಬಾ ತೊಂದರೆ ಆಗುತ್ತದೆ.

ಆದ್ದರಿಂದ ತಾವು ದಯಮಾಡಿ, ಸದರಿ ಸಾಹಿತ್ಯ ಸಮ್ಮೇಳನವನ್ನು 2022ರ ಸೆಪ್ಟೆಂಬರ್ 23, 24 ರ ಬದಲಾಗಿ ಇದರ ಹಿಂದಿನ ದಿನಾಂಕಗಳಲ್ಲಿಯಾಗಲಿ ಅಥವಾ ಮುಂದಿನ ದಿನಾಂಕಗಳಲ್ಲಿ ನಡೆಸಲು ತೀರ್ಮಾನಿಸಬೇಕಾಗಿ ತಮ್ಮಲ್ಲಿ ವಿನಂತಿಸುತ್ತೇನೆ.

ಈ ಪತ್ರವನ್ನು ಪರಮಪೂಜ್ಯ ಶ್ರೀ ತರಳಬಾಳು ಜಗದ್ಗುರು ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರ ಅಪ್ಪಣೆ ಮೇರೆಗೆ ತಮಗೆ ಬರೆಯಲಾಗಿದೆ.

ವಂದನೆಗಳೊಂದಿಗೆ,

ಇತಿ, ತಮ್ಮ ವಿಶ್ವಾಸಿ,

ಕಾರ್ಯದರ್ಶಿ

ಕನ್ನಡ ಸಾಹಿತ್ಯ ಪರಿಷತ್ತು
ಇಂ. ನಂ. 21/ ೧೮
ತಾ॥ 08/07/22
ಬೆಂಗಳೂರು – ೧೮.